E-Mail:jdirglb2015@gmail.com

Fax No: 08472-222065, Off. No: 08472-222064.

# ಕರ್ನಾಟಕ ಸರ್ಕಾರ

## (ಕಾಲೇಜು ಶಿಕ್ಷಣ ಇಲಾಖೆ)

ಸಂಖ್ಯೆ: ಕಾಶಿಇ/ಪ್ರಾಕಕ/187/ಖಾಹುಭ/02/2022-23.

ಪ್ರಾದೇಶಿಕ ಜಂಟಿ-ನಿರ್ದೇಶಕರ ಕಛೇರಿ,
ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ,
ದಿನಾಂಕ:15-03-2023.

ಗೆ,
ಅಧ್ಯಕ್ಷರು/ಕಾರ್ಯದರ್ಶಿಗಳು,
ಶರಣಬಸವೇಶ್ವರ ವಿದ್ಯಾ ವರ್ಧಕ ಸಂಘ,
ಕಲಬುರಗಿ-585 103

ಮಾನ್ಯರೇ,

ವಿಷಯ:- ಶರಣಬಸವೇಶ್ವರ ವಿದ್ಯಾವರ್ಧಕ ಸಂಘ,ಕಲಬುರಗಿ ಇದರ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಇಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತಾಲಯದ ಪತ್ರ ಸಂಖ್ಯೆ: ಕಾಶಿಇ/96/ಹೈಕ/ಮೀಸಲಾತಿ/2016-17/ ನೇವಿ-2 ದಿನಾಂಕ: 14-03-2023.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ ತಮ್ಮ ಸಂಘದ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಾದ (1)ಶರಣಬಸವೇಶ್ವರ ಕಲಾ ಕಾಲೇಜು ಕಲಬುರಗಿ, (2) ಶರಣಬಸವೇಶ್ವರ ವಿಜ್ಞಾನ ಕಾಲೇಜು ಕಲಬುರಗಿ, (3)ಶರಣಬಸವೇಶ್ವರ ವಾಣಿಜ್ಯ ಕಾಲೇಜು ಕಲಬುರಗಿ, (4) ಗೋದುತಾಯಿ ದೊಡ್ಡಪ್ಪ ಅಪ್ಪಾ ಕಲಾ ವಾಣಿಜ್ಯ ಮಹಿಳಾ ಕಾಲೇಜು ಕಲಬುರಗಿ, (5) ಎಸ್.ಎಸ್.ಕೆ.ಬಿ. ಬಸವೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜು ಬಸವಕಲ್ಯಾಣ ಇಲ್ಲಿಯ ಕಾಲೇಜುಗಳಲ್ಲಿ ಸ್ಥಳಿಯ ವೃಂದದಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದ್ದು ಅದರಂತೆ (1)ಆಂಗ್ಲಭಾಷೆ-03, (2)ಅರ್ಥಶಾಸ್ತ್ರ-03, (3)ರಾಜ್ಯಶಾಸ್ತ್ರ-01, (4)ವಾಣಿಜ್ಯಶಾಸ್ತ್ರ-01, (5)ಭೌತಶಾಸ್ತ್ರ-07, (6)ರಸಾಯನಶಾಸ್ತ್ರ-04, (7)ಸಸ್ಯಶಾಸ್ತ್ರ-01, (8)ಪ್ರಾಣಿಶಾಸ್ತ್ರ-02, (9)ಗ್ರಂಥಪಾಲಕರು-02 ಮತ್ತು (10)ದೈಹಿಕ ಶಿಕ್ಷಣ ನಿರ್ದೇಶಕರು-04, ಸ್ಥಳಿಯ ವೃಂದದಲ್ಲಿ ಖಾಲಿ ಇರುವ ಒಟ್ಟು 28 ಬೋಧಕ ಹುದ್ದೆಗಳನ್ನು ಮೀಸಲಾತಿ ಅನ್ವಯದಂತೆ ಮುಂದುವರೆಸಿ ಮಾನ್ಯ ಆಯುಕ್ತಾಲಯದ ಪತ್ರದ ದಿನಾಂಕ: 14-03-2023ರಲ್ಲಿಯ ನಿಬಂಧನೆಗಳನ್ನು ವಿಧಿಸಿ ಸಂಬಂಧಿಸಿದ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಅನುಮತಿಯನ್ನು ನೀಡಲಾಗಿರುತ್ತದೆ.

ಮುಂದುವರೆದು ಆಯ್ಕೆ ಪ್ರಕ್ರಿಯೆಯನ್ನು ನಿಯಮಾನುಸಾರ ಪೂರ್ಣಗೊಳಿಸಿ ಅನುಮೋದನೆಗಾಗಿ ಅಗತ್ಯ ದಾಖಲೆಗಳನ್ನು ತ್ರಿಪ್ರತಿಗಳಲ್ಲಿ ಹಾಗೂ ಮಾಹಿತಿಯನ್ನು ಅನುಬಂಧ-3ರಲ್ಲಿ ಭರ್ತಿ ಮಾಡಿ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಅಡಕ:- ಉಲ್ಲೇಖಿತ ಪತ್ರ.

ತಮ್ಮ ವಿಶ್ವಾಸಿ,
15/3/2023
ಪ್ರಾದೇಶಿಕ ಜಂಟಿ ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಗಳು:
1) ಮಾನ್ಯ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ಪ್ರಾಂಶುಪಾಲರು, ಶರಣಬಸವೇಶ್ವರ ಕಲಾ ಕಾಲೇಜು ಕಲಬುರಗಿ.
3) ಪ್ರಾಂಶುಪಾಲರು, ಶರಣಬಸವೇಶ್ವರ ವಿಜ್ಞಾನ ಕಾಲೇಜು ಕಲಬುರಗಿ.
4) ಪ್ರಾಂಶುಪಾಲರು, ಶರಣಬಸವೇಶ್ವರ ವಾಣಿಜ್ಯ ಕಾಲೇಜು ಕಲಬುರಗಿ.
5) ಪ್ರಾಂಶುಪಾಲರು, ಗೋದುತಾಯಿ ದೊಡ್ಡಪ್ಪ ಅಪ್ಪಾ ಕಲಾ ವಾಣಿಜ್ಯ ಮಹಿಳಾ ಕಾಲೇಜು ಕಲಬುರಗಿ.
6) ಪ್ರಾಂಶುಪಾಲರು, ಎಸ್.ಎಸ್.ಕೆ.ಬಿ. ಬಸವೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜು ಬಸವಕಲ್ಯಾಣ
7) ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/96/ಹೈಕ/ಮೀಸಲಾತಿ/2016-17/ನೇವಿ-2 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರುದಿನಾಂಕ: 14.03.2023.

**ಇವರಿಗೆ,**

ಜಂಟಿ ನಿರ್ದೇಶಕರು,
ಪ್ರಾದೇಶಿಕ ಕಛೇರಿ,
ಕಾಲೇಜು ಶಿಕ್ಷಣ ಇಲಾಖೆ,
**ಕಲಬುರಗಿ**

ಮಾನ್ಯರೆ,

ವಿಷಯ: ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಕಲಬುರಗಿ ಇದರ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್/06/ಡಿಪಿಎಆರ್/06/ಪಿಎಲ್‌ಎಕ್ಸ್/2012, ದಿನಾಂಕ:06.11.2013 ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರ ಕಾಲಕಾಲಕ್ಕೆ ಹೊರಡಿಸಿರುವ ತಿದ್ದುಪಡಿ ಆದೇಶಗಳು.
2) ಈ ಕಛೇರಿಯ ಸಮ ಸಂಖ್ಯೆ ಆದೇಶ ದಿನಾಂಕ:27.08.2016.
3) ಸರ್ಕಾರದ ಪತ್ರ ಸಂಖ್ಯೆ:ಇಡಿ/240/ಯುಪಿಸಿ/2014, ದಿನಾಂಕ:01.09.2017
4) ಕಲಬುರಗಿ ಪ್ರಾದೇಶಿಕ ಜಂಟಿ ನಿರ್ದೇಶಕರ ಪತ್ರ ಸಂಖ್ಯೆ:ಕಾಶಿಇ/ಪ್ರಾಕಕ/212/ಹೈ.ಕ.ಖಾಹುಭ/1/2017-18, ದಿನಾಂಕ:27.11.2018, 13.06.2018.
5) ಸರ್ಕಾರದ ಆದೇಶ ಸಂಖ್ಯೆ:ಇಡಿ/483/ಯುಎನ್‌ಇ/2017, ದಿ:16.03.2019
6) ಯು.ಜಿ.ಸಿ ಅಧಿಸೂಚನೆ ಸಂಖ್ಯೆ:F.1-2/2017(EC/PS), ದಿ:18.07.2018.
7) ಸರ್ಕಾರದ ಪತ್ರ ಸಂಖ್ಯೆ:ಇಡಿ/240/ಯುಪಿಸಿ/2018, ದಿನಾಂಕ:18.08.2018.
8) ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ:04.03.2020
9) ಸರ್ಕಾರದ ಪತ್ರ ಸಂಖ್ಯೆ:ಇಡಿ/105/ಯುಪಿಸಿ/2020, ದಿ:29.07.2020 & ಇಡಿ/98/ಯುಪಿಸಿ/2020, ದಿ:13.08.2020.
10) ಸರ್ಕಾರದ ಪತ್ರ ಸಂಖ್ಯೆ:ಇಡಿ/95/ಯುಪಿಸಿ/2020(ಇ), ದಿನಾಂಕ:14.07.2022
11) ತಮ್ಮ ಪತ್ರ ಸಂಖ್ಯೆ:ಕಾಶಿಇ/ಪ್ರಾಕಕ/212/ಹೈಕ.ಖಾಹುಭ/1/2017-18, ದಿನಾಂಕ:18.08.2022 & 14.02.2023
12) ಸರ್ಕಾರದ ಪತ್ರ ಸಂಖ್ಯೆ:ಇಡಿ/160/ಯುಪಿಸಿ/2022(ಇ), ದಿ:05.12.2022.

** ** **

ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ ಇದರ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ವಿವಿಧ ವಿಷಯ/ವೃಂದಗಳಲ್ಲಿ ಮಂಜೂರಾದ ಬೋಧಕರ ಒಟ್ಟು ಹುದ್ದೆಗಳಲ್ಲಿ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ (ನೇರ ನೇಮಕಾತಿಗೆ) ಹುದ್ದೆಗಳನ್ನು ಹಂಚಿಕೆ ಮಾಡಿ ಅನುಮೋದನೆಗಾಗಿ ಈ ಹಿಂದೆ ಆಡಳಿತ ಮಂಡಳಿಯು ಇಲಾಖೆಗೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಸ್ಪಷ್ಟೀಕರಣ ಪಡೆದು ನಂತರ ಸದರಿ ಕಾಲೇಜುಗಳಲ್ಲಿ ವಿವಿಧ ವಿಷಯಗಳಲ್ಲಿ ಮಂಜೂರಾದ ಒಟ್ಟು ಬೋಧಕರ ಹುದ್ದೆಗಳ ಪೈಕಿ ಆಡಳಿತ ಮಂಡಳಿಯು ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಹುದ್ದೆಗಳನ್ನು ಹಂಚಿಕೆ ಮಾಡಿರುವುದನ್ನು ಉಲ್ಲೇಖ (2)ರ ಆದೇಶದಲ್ಲಿ ಅನುಮೋದಿಸಲಾಗಿದೆ.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ ಇದರ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿರುವ ಬೋಧಕರ ಹುದ್ದೆಗಳನ್ನು 2017-18ನೇ ಶೈಕ್ಷಣಿಕ ಸಾಲಿನ ಕಾರ್ಯಭಾರಕ್ಕನುಗುಣವಾಗಿ ಖಾಲಿಯಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಉಲ್ಲೇಖ(4)ರ ಪತ್ರದಲ್ಲಿ ತಾವು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಪರಿಶೀಲಿಸಿ, ನಂತರ ಉಲ್ಲೇಖ (8) ರ ಪತ್ರದಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಆಡಳಿತ ಮಂಡಳಿಗೆ ಅನುಮತಿ ನೀಡುವ ಬಗ್ಗೆ ಸರ್ಕಾರದ ಅನುಮೋದನೆ ಕೋರಲಾಗಿತ್ತು.

ಈ ಮಧ್ಯ ಕೋವಿಡ್-19 ರ ಪ್ರಯುಕ್ತ, ಸರ್ಕಾರವು ಉಲ್ಲೇಖ(9) ರ ಪತ್ರಗಳಲ್ಲಿ ಆರ್ಥಿಕ ಮಿತವ್ಯಯ ಆದೇಶವನ್ನು ಜಾರಿಗೊಳಿಸಿದ್ದರಿಂದ ಬೋಧಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಇಲಾಖಾವತಿಯಿಂದ ಆಡಳಿತ ಮಂಡಳಿಗೆ ಅನುಮತಿ ನೀಡಿರುವುದಿಲ್ಲ.

ತದನಂತರ ಉಲ್ಲೇಖ (10)ರ ಪತ್ರದಲ್ಲಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಕಲಬುರಗಿ ಇದರ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪ್ರ.ದ.ಕಾ ಗಳಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಚೆಕ್‌ಲಿಸ್ಟ್‌ನ ನಮೂನೆಯಂತೆ ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶಿಸಲಾಗಿರುತ್ತದೆ. ನಂತರ ಉಲ್ಲೇಖ (12) ರ ಸರ್ಕಾರದ ಪತ್ರದಲ್ಲಿ ಖಾಲಿ ಹುದ್ದೆಗಳನ್ನು ಪ್ರಚಲಿತ ನಿಯಮಗಳಂತೆ ಹಾಗೂ ಅರ್ಹತೆಯಂತೆ ಭರ್ತಿ ಮಾಡಿಕೊಳ್ಳಲು ಆಡಳಿತ ಮಂಡಳಿಗಳಿಗೆ ಅನುಮತಿ ನೀಡುವ ಅಧಿಕಾರವನ್ನು ಕಾಲೇಜು ಶಿಕ್ಷಣ ಆಯುಕ್ತರಿಗೆ ಪ್ರತ್ಯಾಯೋಜಿಸಲಾಗಿದೆ. ಅದರಂತೆ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿಯಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ವರದಿ ನೀಡಲು ಇಲಾಖಾ ಹಂತದಲ್ಲಿ ತ್ರಿಸದಸ್ಯ ಸಮಿತಿಯನ್ನು ರಚಿಸಲಾಗಿದೆ.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ ಇದರ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿಯಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಉಲ್ಲೇಖ (11)ರ ಪತ್ರಗಳಲ್ಲಿ ತಾವು ಈ ಕಛೇರಿಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ತ್ರಿಸದಸ್ಯ ಸಮಿತಿಯು ಪರಿಶೀಲಿಸಿ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ಪೈಕಿ ಕಾರ್ಯಭಾರಕ್ಕನುಗುಣವಾಗಿ ಖಾಲಿ ಇರುವಂತಹ ಒಟ್ಟು-28 ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ಮಂಡಳಿಗೆ ಅನುಮತಿ ನೀಡಬಹುದಾಗಿದೆ ಎಂಬುದಾಗಿ ಹಾಗೂ ಸದರಿ ಹುದ್ದೆಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/01/ಸೆಹಿಮ/2022, ದಿನಾಂಕ:28.12.2022 & ಆದೇಶ ಸಂಖ್ಯೆ:ಸಿಆಸುಇ/02/ಸೆಹಿಮ/2023, ದಿನಾಂಕ:08.03.2023 ರಲ್ಲಿ ತಿಳಿಸಿರುವಂತೆ ಮೀಸಲಾತಿಯನ್ನು ನಿಗಧಿಪಡಿಸಬಹುದಾಗಿದೆ ಎಂಬುದಾಗಿ ತ್ರಿಸದಸ್ಯ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಆದ್ದರಿಂದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ ಇದರ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜಗಳಲ್ಲಿ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಕೆಲವೊಂದು ಷರತ್ತುಗಳಿಗೊಳಪಟ್ಟು ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

| ಕ್ರಮ ಸಂಖ್ಯೆ | ವಿಷಯ | ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ಸಂಖ್ಯೆ | ಸ್ಥಳೀಯ ವೃಂದದಲ್ಲಿ ಖಾಲಿ ಇರುವ ಹುದ್ದೆಗಳಿಗೆ ನಿಗಧಿಪಡಿಸಿರುವ ಮೀಸಲಾತಿ | ಷರಾ |
|---|---|---|---|---|
| 1 | ಅಂಗ್ಲಭಾಷೆ | 03 | ಪ.ಜಾ-01 | ಶ್ರೀ.ಕೆ.ವಿ.ದಿವಾಕರನ್ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.06.1998 |
| | | | ಸಾ.ಅ - 01 | ಶ್ರೀ.ಎಸ್.ಎಂ ಮುಂಬಯಿ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.04.1988) |
| | | | ಪ.ಪಂ - 01 | ಶ್ರೀ.ಎಂ.ಬಿರಾದಾರ್ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:31.01.2001) |
| 2 | ಅರ್ಥಶಾಸ್ತ್ರ | 03 | ಪ.ಜಾ -01 | ಶ್ರೀ.ಜಿ. ಶಿವಶಂಕರ್ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:31.05.1999 |
| | | | ಸಾ.ಅ - 01 | ಶ್ರೀ.ಸಿ.ಬಿ. ಜವಳಿ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:28.02.2011) |
| | | | ಪ.ಪಂ -01 | ಶ್ರೀ.ಸಿ.ಬಿ. ಪ್ರತಾಪೂರ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿನಾಂಕ:31.01.2014) |
| 3 | ರಾಜ್ಯಶಾಸ್ತ್ರ | 01 | ಪ.ಜಾ - 01 | ಶ್ರೀ. ಎಸ್.ಸಿ. ಹಿರೇಮಠ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:31.05.2006) |
| 4 | ವಾಣಿಜ್ಯಶಾಸ್ತ್ರ | 01 | ಪ.ಜಾ - 01 | ಶ್ರೀ. ಆರ್.ಎಂ. ಪಾಟೀಲ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:31.05.2008) |
| 5 | ಭೌತಶಾಸ್ತ್ರ | 07 | ಪ.ಜಾ -01 | ಶ್ರೀ. ಜಿ.ವಿ. ಪಾಟೀಲ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.04.1993) |
| | | | ಸಾ.ಅ-01 | ಶ್ರೀ. ಕೆ.ಮಲ್ಲಿಕಾರ್ಜುನ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.11.1995) |
| | | | ಪ.ಪಂ – 01 | ಶ್ರೀ. ಎಸ್.ಬಿ.ಪತಂಗಿ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.04..2001) |
| | | | ಸಾ.ಅ(ಮ) -01 | ಶ್ರೀ. ಬಿ.ವಿರುಪಾಕ್ಷಪ್ಪ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.06.2001) |

| | | | | |
|---|---|---|---|---|
| | | | ಪ್ರವರ್ಗ-I -01 | ಶ್ರೀ. ವಿ.ಹೆಚ್.ಅಯಣ್ಣನವರ್ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:31.05.2007) |
| | | | ಸಾ.ಅ (ಗ್ರಾ.ಅ) - 01 | ಶ್ರೀ.ಬಿ.ಎಸ್.ಮಾಕಲ್ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:28.02.2015) |
| | | | 2ಎ - 01 | ಶ್ರೀ. ಮಲ್ಲಿಕಾರ್ಜುನ ಎಸ್.ಉಪ್ಪಿನ್ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.09.2015) |
| 6 | ರಸಾಯನಶಾಸ್ತ್ರ | 04 | ಪ.ಜಾ -01 | ಶ್ರೀ. ಎಂ.ಎಸ್. ಯಡಹಳ್ಳಿ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:31.03.1996) |
| | | | ಸಾ.ಅ-01 | ಶ್ರೀಎಸ್.ಬಿ.ಮಹಾಜನ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:31.07.2000) |
| | | | ಪ.ಪಂ -01 | ಶ್ರೀ. ವಿ.ಎಸ್.ಗಣಪತಿ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ28.02.2003) |
| | | | ಸಾ.ಅ(ಮ)-01 | ಶ್ರೀ. ಎಸ್.ಬಿ.ಜಿಗಳೂರ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ: 29.02.2004) |
| 7 | ಸಸ್ಯಶಾಸ್ತ್ರ | 01 | ಪ.ಜಾ-01 | ಶ್ರೀ. ಎಸ್.ಕೆ.ಭದ್ರೆ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:31.12.2001) |
| 8 | ಪ್ರಾಣಿಶಾಸ್ತ್ರ | 02 | ಪ.ಜಾ-01 | ಶ್ರೀ. ಆರ್.ಬಿ.ಮಹಾಜನ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.09.2007) |
| | | | ಸಾ.ಅ-01 | ಶ್ರೀ. ಜೆ.ಸೋಮನಾಥರಡ್ಡಿ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.11.2011) |
| 9 | ಗ್ರಂಥಪಾಲಕರು | 02 | ಪ.ಜಾ-01 | ಶ್ರೀ.ಎಸ್.ಬಿ.ದೊತ್ರಗಾಂವ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.11.1998) |
| | | | ಸಾ.ಅ-01 | ಶ್ರೀ.ವಿ.ಭಂಡಿ. ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.11.2014) |
| 10 | ದೈ.ಶಿ.ನಿ | 04 | ಪ.ಜಾ-01 | ಶ್ರೀ.ಜೆ.ವಿ.ಹೊಲಿ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.06.2005) |

| | | | | |
|---|---|---|---|---|
| | | | ಸಾ.ಅ-01 | ಶ್ರೀ. ಘಡಿಯಾಳ ಸ್ವಾಮಿ.ಬಿ.ಎಂ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:30.06.2002) |
| | | | ಪ.ಪಂ-01 | ಶ್ರೀ. ಎಸ್.ಎಂ.ಹೊಳಿ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:28.02.2003) |
| | | | ಸಾ.ಅ(ಮ) | ಶ್ರೀ. ರುದ್ರಗೌಡ.ಬಿ. ಮಾಲಿಪಾಟೀಲ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ನಿವೃತ್ತಿ ದಿ:31.08.2006) |
| ಒಟ್ಟು ಹುದ್ದೆಗಳ ಸಂಖ್ಯೆ | | 28 | | |

ಮೇಲ್ಕಂಡ ಖಾಲಿ ಹುದ್ದೆಗಳನ್ನು ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಹಾಗೂ ಯು.ಜಿ.ಸಿ ನಿಯಮಗಳನ್ವಯ ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಖಾಲಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಉಲ್ಲೇಖ (5) & (6)ರಂತೆ ಆಯ್ಕೆ ಸಮಿತಿ ರಚಿಸಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿ ಮೂಲಕ ಸಂದರ್ಶನ ನಡೆಸಿ, ನಿಯಮಾನುಸಾರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡು ನೇಮಕಾತಿ ಅನುಮೋದನೆಗಾಗಿ ಸರ್ಕಾರವು ನಿರ್ದೇಶಿಸಿರುವಂತೆ ಆರ್ಥಿಕ ಇಲಾಖೆಯು ನಿಗಧಿಪಡಿಸಿರುವ ಅನುಬಂಧ-4 ರಲ್ಲಿ ಅಗತ್ಯ ವಿವರಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ದೃಢೀಕೃತ ದಾಖಲೆಗಳೊಂದಿಗೆ ತಮ್ಮ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವಂತೆ ಆಡಳಿತ ಮಂಡಳಿಗೆ ತಿಳಿಸುವುದು. ನಂತರ ಆಡಳಿತ ಮಂಡಳಿಯಿಂದ ಸ್ವೀಕೃತಗೊಂಡ ಪ್ರಸ್ತಾವನೆಯನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರಿ ಹಾಗೂ ಯು.ಜಿ.ಸಿ ನಿಯಮಗಳನ್ವಯ ತಮ್ಮ ಹಂತದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಆಯ್ಕೆ ಸಮಿತಿ ಮೂಲಕ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿ ಅನುಮೋದನೆಗಾಗಿ ಸಂಬಂಧಪಟ್ಟ ದೃಢೀಕೃತ ದಾಖಲೆಗಳೊಂದಿಗೆ ಮತ್ತು ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

**ನಿಬಂಧನೆಗಳು:-**

1) ಈ ಆದೇಶದಲ್ಲಿ ಅನುಮತಿ ನೀಡಿರುವ ಖಾಲಿ ಹುದ್ದೆಗಳನ್ನು ಉಲ್ಲೇಖ (1)ರ ಆದೇಶದ ನಿಯಮಗಳನ್ವಯ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಂದ ಮಾತ್ರ ಭರ್ತಿ ಮಾಡತಕ್ಕದ್ದು.
2) ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ 55% ಅಂಕಗಳನ್ನು ಪಡೆದಿರಬೇಕು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇಕಡ 50 ಅಂಕಗಳು) ಮತ್ತು ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪಿ.ಹೆಚ್.ಡಿ ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಪಿಹೆಚ್.ಡಿ. ಪದವಿಯನ್ನು ಕೋರ್ಸ್‌ವರ್ಕ್‌ನೊಂದಿಗೆ ಪಡೆಯಬೇಕಾಗಿರುತ್ತದೆ. ಒಂದು ವೇಳೆ ದಿನಾಂಕ:11.07.2009ರ ಪೂರ್ವದಲ್ಲಿ ಪಿಹೆಚ್.ಡಿ. ಪದವಿ ಪಡೆದಿದ್ದಲ್ಲಿ/ಪಿಹೆಚ್.ಡಿ. ಪದವಿಗೆ ನೋಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ:04.05.2016ರ ಯುಜಿಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತುಗಳಿಗೊಳಪಟ್ಟಿರುತ್ತದೆ. ದಿನಾಂಕ:11.07.2009ರ ನಂತರದ ಯಾವುದೇ ನೇಮಕಾತಿಗೆ ಎಂ.ಫಿಲ್. ವಿದ್ಯಾರ್ಹತೆ ಪರಿಗಣಿಸತಕ್ಕದ್ದಲ್ಲ.
3) ಪ್ರತಿಯೊಂದು ಹುದ್ದೆಗಳನ್ನು ಜಾಹಿರಾತುಗೊಳಿಸುವ ದಿನಾಂಕದಂದು ಹುದ್ದೆಗೆ ನಿಗದಿತ ಕನಿಷ್ಠ ಕಾರ್ಯಭಾರ ಅಂದರೆ ಪ್ರಯೋಗಾಲಯ ತರಗತಿಗಳನ್ನು ಹೊಂದಿರುವ ವಿಷಯಗಳಲ್ಲಿ 20 ಗಂಟೆ ಮತ್ತು ಪ್ರಯೋಗಾಲಯ ತರಗತಿಗಳನ್ನು ಹೊಂದಿಲ್ಲದ ವಿಷಯಗಳಲ್ಲಿ 16 ಗಂಟೆ ಕಾರ್ಯಭಾರ ಕಡ್ಡಾಯವಾಗಿರಬೇಕು. ನಿಗದಿತ ಪೂರ್ಣಕಾಲಿಕ ಕಾರ್ಯಭಾರ ಇಲ್ಲದಿರುವ ಹುದ್ದೆಗಳಿಗೆ ಜಾಹಿರಾತು ಪ್ರಕಟಣೆ ನೀಡಬಾರದೆಂದು. ಹಾಗೂ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಕ್ರಮ ಕೈಗೊಳ್ಳಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.
4) ಸದರಿ ಹುದ್ದೆಗಳು ಅನುಮೋದಿತ ಹಾಗೂ ಮಂಜೂರಾದ (ನಿವೃತ್ತಿ, ಮರಣ, ರಾಜೀನಾಮೆ ಮತ್ತು ಸ್ವಯಂ ನಿವೃತ್ತಿಯಿಂದ ತೆರವಾಗಿರುವ) ಹುದ್ದೆಗಳಾಗಿರಬೇಕು.

5) ಮೇಲ್ಕಂಡ ಹುದ್ದೆಗಳಲ್ಲಿ ಯಾರಾದರೂ ಅರೆಕಾಲಿಕ ಹಾಗೂ ಸ್ಟಾಪ್-ಗ್ಯಾಪ್ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದ್ದಲ್ಲಿ, ಅಂತಹ ಹುದ್ದೆಗಳನ್ನು ಭರ್ತಿ ಮಾಡುವಾಗ ನ್ಯಾಯಾಲಯದ ಆದೇಶದ ಪ್ರಕಾರ ಮತ್ತು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕು.

6) ಉಲ್ಲೇಖ (6)ರ ಯು.ಜಿ.ಸಿ. ನಿಯಮ 3.1 ರಂತೆ ಜಾಹಿರಾತನ್ನು ರಾಷ್ಟ್ರಮಟ್ಟದಲ್ಲಿ ಜಾಹಿರಾತುಗೊಳಿಸುವುದು. & 01 ರಾಜ್ಯ ಪತ್ರಿಕೆಯಲ್ಲಿ ಪ್ರಕಟಪಡಿಸುವುದು.

7) ನೇಮಕಾತಿ ನಿಯಮದಂತೆ ಅಭ್ಯರ್ಥಿಗಳು ಕನಿಷ್ಠ ಮತ್ತು ಗರಿಷ್ಠ ವಯೋಮಿತಿ ಒಳಗೆ ಇರಬೇಕು (ದಿನಾಂಕ:20.06.2018ರ ಸರ್ಕಾರದ ಆದೇಶ ಸಂಖ್ಯೆ: ಇಡಿ/49/ಯುಪಿಸಿ/2018ರ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ & ಕ್ಯಾಟಗರಿ-1 ಗರಿಷ್ಠ 45, ಇತರೆ ಹಿಂದುಳಿದ ವರ್ಗ ಗರಿಷ್ಠ 43 ಹಾಗೂ ಸಾಮಾನ್ಯ ವರ್ಗ ಗರಿಷ್ಠ 40 ವರ್ಷಗಳು).

8) ಖಾಲಿ ಹುದ್ದೆಗಳ ಭರ್ತಿಗೆ ನೀಡಿರುವ ಅನುಮತಿಯನ್ನು ಹಾಗೂ ಆಯ್ಕೆ ಪ್ರಕ್ರಿಯೆಯನ್ನು ಯಾವುದೇ ಹಂತದಲ್ಲಾದರೂ ರದ್ದುಪಡಿಸುವ ಅಧಿಕಾರವನ್ನು ಇಲಾಖೆ/ಸರ್ಕಾರವು ಹೊಂದಿರುತ್ತದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಖಾಲಿ ಹುದ್ದೆಗಳಿಗೆ ಅಭ್ಯರ್ಥಿಗಳು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ. (ಈ ಷರತ್ತನ್ನು ಪತ್ರಿಕಾ ಜಾಹಿರಾತಿನಲ್ಲಿ ಕಡ್ಡಾಯವಾಗಿ ಆಡಳಿತ ಮಂಡಳಿಯು ನೀಡತಕ್ಕದ್ದು)

9) ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಉಲ್ಲೇಖ (5)ರ ಸರ್ಕಾರದ ಆದೇಶದ ಕಂಡಿಕೆ (16) ರಲ್ಲಿ ತಿಳಿಸಿರುವಂತೆ ಹಾಗೂ ಉಲ್ಲೇಖ (6)ರ ಯು.ಜಿ.ಸಿ ಅಧಿಸೂಚನೆಯ ಕಂಡಿಕೆ 5.1 (V) ರಂತೆ ಆಯ್ಕೆ ಸಮಿತಿಯನ್ನು ರಚಿಸಿ, ಸದರಿ ಅಧಿಸೂಚನೆಯ ಕಂಡಿಕೆ (6)ರಲ್ಲಿ ತಿಳಿಸಿರುವಂತೆ ಪಾರದರ್ಶಕವಾಗಿ ಹಾಗೂ Appendix-IIರ . Table 1, 2, 3B, 4 & 5ರಲ್ಲಿ ತಿಳಿಸಿರುವ ನಿಯಮಗಳಂತೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸುವುದು.

10) ಹುದ್ದೆಗಳಿಗೆ ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ, ಆಯ್ಕೆ ವಿಧಾನದಂತೆ ನೇಮಕಾತಿ ನಿಯಮಗಳನ್ನು ಪಾಲಿಸಿ ಪಾರದರ್ಶಕವಾಗಿ ನೇಮಕಾತಿ ಮಾಡಿಕೊಳ್ಳತಕ್ಕದ್ದು & ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ:ಇಡಿ/146/ಯುಪಿಸಿ/1979 ದಿನಾಂಕ:03.10.1981ರ ಅಂಶಗಳನ್ನು ದಾಖಲೆಗಳ ಸಹಿತ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸತಕ್ಕದ್ದು.

11) ಕರ್ನಾಟಕ ಶಿಕ್ಷಣ ಸಂಸ್ಥೆ (ಕಾಲೇಜು ಶಿಕ್ಷಣ) ನಿಯಮಗಳು 2003 ರಂತೆ ಕೂಲಂಕಷವಾಗಿ ಪರಿಶೀಲಿಸಿ ಕ್ರಮವಹಿಸತಕ್ಕದ್ದು.

12) ಕಾಲೇಜಿನ ಆಡಳಿತ ಮಂಡಳಿ ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರು ನೀಡಿರುವ ಮಾಹಿತಿ ಆಧಾರಿತ ಸದರಿ ಕಾಲೇಜಿನಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದ್ದು, ಈ ಬಗ್ಗೆ ತಪ್ಪು ಮಾಹಿತಿ/ವ್ಯತ್ಯಾಸದ ಮಾಹಿತಿ ನೀಡಿ ಮುಂದೆ ಅಸಂಗತತೆ ಏನಾದರೂ ಉದ್ಭವಿಸಿದಲ್ಲಿ ಇದಕ್ಕೆ ಸಂಬಂಧಪಟ್ಟ ಆಡಳಿತ ಮಂಡಳಿ ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ಆಯುಕ್ತರು

ಪ್ರತಿಯನ್ನು:-
1) ಅಧ್ಯಕ್ಷರು/ಕಾರ್ಯದರ್ಶಿಗಳು ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ.
2) ಕಛೇರಿ ಪ್ರತಿ